OC-325
T.P-2

51st Year of Publication ★★ SATYAVADI Daily, MYSORE 4

Reg No B G 155

25 - 6 - 1968

ಪ್ರಸ್ತುತ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಶ್ರೀ

ಸತ್ಯವಾದಿ

Space available

For Permanent Advertisement

ಸ್ಥಾಪಕರು : ತರುಣ ಸಮಿತಿಯವರು ಎಂ. ವಿ. ಸುಬ್ಬರಾವ್ ಸಂಸ್ಥಾಪಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶದಲ್ಲಿ ಆಹಾರ ಸ್ವಾವಲಂಬನೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ಸೆನೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ಪ್ತಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪದ್ಮಭೂಷಣ ಡಾ || ಮೋದಿ

ದಾವಣಗೆರೆ— ಪದ್ಮಭೂಷಣ ಡಾ || ಎಂ. ಸಿ. ಮೋದಿಯವರು ವಿಶ್ವಪರ್ಯಟನೆಗಾಗಿ ನಿನ್ನೆ ವಿಮಾನದಲ್ಲಿ ಅಮೇರಿಕಾಕ್ಕೆ ಪ್ರಯಾಣಮಾಡಿದರು.

★

ಆಸ್ತಮ, ಹಿಷ್ಟೀರಿಯ ಚಿಕಿತ್ಸೆ

ಪ್ರಪಂಚದಲ್ಲೆ ಪ್ರಪ್ರಥಮವಾಗಿ, ಅಸ್ತಿಪತವಾಗಿರುವ ಗೂರ್ಲು (ಆಸ್ತಮ) ಮತ್ತು ಉನ್ಮಾದ (ಹಿಸ್ಟೀರಿಯಾ) ಗುಣಪಡಿಸಲಾಗುವುದು. ಪ್ರಖ್ಯಾತ ಭಾರತೀಯ ಸಂತ ಬಾಬಾ ಬಹದ್ದೂರ್ ಷಾರವರು ತಾನೇ ಕಂಡುಹಿಡಿದಿರುವ ಸೂಜಿ ಚಿಕಿತ್ಸಾಕ್ರಮದಿಂದ (ನೀಡ್ಲ್ ಕ್ಯೂರ್) ಮೃತ್ಯುಶಯ್ಯೆಯಲ್ಲಿದ್ದ ನೂರಾರು ರೋಗಿಗಳನ್ನು ಗುಣಪಡಿಸಿದ್ದಾರೆ. ರೋಗಿಯ ಕೆವಿಯ ಒಂದು ನರವನ್ನು ಯಾವುದೇ ತೊಂದರೆ ಅಥವಾ ನೋವು ಉಂಟಾಗದಂತೆ ಚುಚ್ಚಿ ನವೀನ ರೀತಿಯಲ್ಲಿ ರೋಗದ ಮೂಲವನ್ನೇ ತೆಗೆದುಹಾಕಲಾಗುವುದು. ಬಾಬಾ ಬಹದ್ದೂರ್ ಷಾರವರು ಕ್ಷಿಪ್ರದಲ್ಲೇ ಬೆಂಗಳೂರು ಮತ್ತು ಮೈಸೂರುಗಳಿಗೆ ಒಂದೊಂದು ದಿನದ ಮಟ್ಟಿಗೆ ಆಗಮಿಸುವರು.

ಬೆಂಗಳೂರು— 26 ನೇ ಜೂನ್ ಬುಧವಾರ ಸುಬೇದಾರ್ ಛತ್ರದ ರಸ್ತೆಯ ಅಂಬಿಕ್ ಲಾಡ್ಜ್ (ಸಂಗಂ ಟಾಕೀಸ್ ಬಳಿ) ನೋಡುವ ಕಾಲ: ಬೆಳಿಗ್ಗೆ 8 ರಿಂದ ಸಂಜೆ 4, ಫೋನ್ ನಂ. 71170.

ಮೈಸೂರು— ಗುರುವಾರ 27 ನೇ ಜೂನ್ ಗಾಂಧಿ ಚೌಕದ ಹೊಟೇಲ್ ದಾಸ್ ಪ್ರಕಾಶ್‌ನಲ್ಲಿ; ನೋಡಬಹುದಾದ ಕಾಲ: ಬೆಳಿಗ್ಗೆ 8 ರಿಂದ ಮಧ್ಯಾಹ್ನ 3, ಫೋನ್ ನಂ 742.

ಮುಂಬೈ ವಿಳಾಸ— ಬಾಬಾ ಬಹದ್ದೂರ್ ಷಾ, ನಂ.1 ಸಾರಂಗ್ ಹೌಸ್, 9 ಪೆಹ್ರು ರೋಡ್, ಸಾಂತಾಕ್ರುಜ್, ಮುಂಬೈ 55 ಫೋನ್ 533300.

ಸರ್ಕಾರವೇ ಕಾರಣ

ಬೆಂಗಳೂರು— ದೇಶದಲ್ಲಿ ಪತ್ರಿಕೆಗಳ ಅಭಿವೃದ್ಧಿಗೆ ಅವಕಾಶವಿಲ್ಲದಿರುವುದಕ್ಕೆ ಸರಕಾರದ ನೀತಿಯೇ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಕಾರಣವೆಂದು ಈಸ್ಟರ್ನ್ ಪ್ರೆಸ್ ಪೇಪರು ಸಂಸ್ಥೆಯ ಅಧ್ಯಕ್ಷ ಶ್ರೀ ಡಿ ಸೌಜಾರವರು ಹೇಳಿದರು.

★

ತಕ್ಸೀರು ರಾಣಿ

ನವದೆಹಲ್ಲಿ— ರಾಜಸ್ಥಾನದ ಸಾನ್ಸಿ ಜನಾಂಗಕ್ಕೆ ಸೇರಿದ 39 ವರ್ಷದ ಮೈನಾ ಡೆಲ್ಲಿಯಲ್ಲಿನ ತಕ್ಸೀರು ರಾಣಿ ಎಂದು ಹೇಳಬುದಾಗಿದೆ. ಣಕೆಯ ಹತೋಟೆಯಲ್ಲಿ ಡೆಲ್ಲಿ ಮತ್ತು ಇತರ ರಾಜ್ಯಗಳಲ್ಲಿ ಅನೇಕ ಕಳ್ಳತನ ಮತ್ತು ಕಳ್ಳ ಮದ್ಯ ವ್ಯಾಪಾರಕ್ಕೆ ಕಾರಣರಾದ ಅನೇಕ ಗುಂಪುಗಳಿವೆ. ಈಕೆ ನಗರವಲ್ಲಿ ತನ್ನ ಮನೆಯಲ್ಲಿ ವಾಸಿಸುತ್ತಿದ್ದು ರೂ. 3 ಲಕ್ಷಕ್ಕೂ ಹೆಚ್ಚು ಆಸ್ತಿ ಹೊಂದಿದ್ದಾಳೆ. ಈಕೆಯ ಜೊತೆಯ ಆವಳ ಮಗಳೂ ಮೂರು ಮಂದಿ ಸೊಸೆಯರು ವಾಸಿಸುತ್ತಿದ್ದಾರೆ. ಇವಳಿಗೆ ಅನೇಕಸಾರಿ ಶಿಕ್ಷೆಯಾಗಿದ್ದು, ಜೈಲಿಂದ ಹೊರಬಂದ ನಂತರವೆಲ್ಲಾ ಇದೇ ಕೆಲಸಕ್ಕೆ ಕೈ ಹಾಕುತ್ತಾಳೆ. ಇವಳ ಸಂಸಾರದವರೆಲ್ಲಾ ಶಿಕ್ಷೆಗೆ ಒಳಗಾದವರೇ ಆಗಿದ್ದಾರೆ. ಮದರಾಸಿನಲ್ಲಿ ನಡೆದ ಡಕಾಯಿಟಿಯಲ್ಲಿ ಈಕೆಯ ಗುಂಪಿನವರು ಸಿಕ್ಕಿಬಿದ್ದಿರುವರು.

★

ಸತ್ಕಾರ ಸಮಾರಂಭ

ಮೈಸೂರು— ನಿನ್ನೆ ಪೌರಸಭೆಯವ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರವರ, ಪೌರಾಡಳಿತ ಮಂತ್ರಿ ಶ್ರೀ ಪುಟ್ಟಸ್ವಾಮಿಯವರ, ವಾರ್ತಾ ಮಂತ್ರಿ ಶ್ರೀ ರಾಜಶೇಖರಮೂರ್ತಿಯವರ ಮತ್ತು ವ್ಯವಸಾಯ ಮಂತ್ರಿ ಶ್ರೀ ಬಿ. ರಾಚಯ್ಯನವರ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ, ಮುಖ್ಯಮಂತ್ರಿಗಳು ಮಾತನಾಡುತ್ತಾ— ಪೌರಸಭೆಯನ್ನು ಕಾರ್ಪೊರೇಷನ್ ಮಾಡುವ ವಿಷಯವು ಸರಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದೂ, ರಾಜ್ಯದಲ್ಲಿ ಹೊಸ ಕೈಗಾರಿಕೆ ಸ್ಥಾಪನೆ ವಿಷಯದಲ್ಲಿ ಲೈಸನ್ಸು ಕೊಡುವ, ಅರ್ಥಸೆರವು ನೀಡುವ, ಮತ್ತಿತರ ವಿಚಾರಕ್ಕೆ ಉನ್ನತಾಧಿಕಾರದ ಸಮಿತಿ ನೇಮಿಸಲು ಸರಕಾರದ ಯೋಚನೆಯಲ್ಲಿರುವುದೆಂದು ಹೇಳಿದರು.

ಆಹಾರಸ್ವಾವಲಂಬನೆ

ಹೈದರಾಬಾದು— ದೇಶದಲ್ಲಿ ವ್ಯವಸಾಯೋತ್ಪಾದನೆಯು ದೇಶಕ್ಕೆ ಅವಶ್ಯಕವಾದಷ್ಟು ಮತ್ತು ಉಳಿತಾಯವೂ ಆಗುವಷ್ಟಾಗುವುದರಿಂದ, ಇನ್ನು 2 - 3 ವರ್ಷಗಳಲ್ಲಿ ಆಹಾರ ಆಮದನ್ನು ನಿಲ್ಲಿಸುತ್ತೇವೆ ಎಂದು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ಹೇಳಿದರು.

★

ಆಶ್ಚರ್ಯ ವಸ್ತು

ಖಟ್ಮಂಡು— ಅತ್ಯಂತ ಹೆಚ್ಚು ಪ್ರಕಾಶದಿಂದ ಕೂಡಿದ ಒಂದು ಆಶ್ಚರ್ಯಕರವಾದ ವಸ್ತು ಕಳೆದ ಬುಧವಾರ ಜನಕಪುರ್ಧಾಪಟ್ಟಣದ ಮೇಲೆ ಕಾಣಿಸಿಕೊಂಡಿತು.

★

ಜೈಲುಗಳ ವಿಷಯ

ನವದೆಹಲಿ— ಮೈಸೂರು ರಾಜ್ಯದಲ್ಲಿ ಮೈಸೂರು ವಿಭಾಗ ಬಿಟ್ಟು ಮಿಕ್ಕೆಲ್ಲ ಕಡೆಯಲ್ಲೂ ಜೈಲು ಕೈಪಿಡಿ ಇದೆಯೆಂದೂ, ರಾಜ್ಯಕ್ಕೆಲ್ಲ ಒಂದೇ ರೀತಿ ಜೈಲು ಕೈಪಿಡಿ ಇರುವದು, ಪರ್ಯಾಲೋಚನೆಯಲ್ಲಿದ್ದೆಯೆಂದೂ, ಖೈದಿಗಳಿಗೆ ಎ, ಬಿ, ಸಿ ತರಗತಿಗಳಿವೆಯೆಂದೂ, ಆರು ರಾಷ್ಟ್ರೀಯ ಹಬ್ಬಗಳಲ್ಲಿ ಅವರಿಗೆ ಸರಕಾರದ ಖರ್ಚಿನಿಂದ ವಿಶೇಷ ಭೋಜನದ ಏರ್ಪಾಟಿದೆಯೆಂದೂ, ಸಂದರ್ಶನ ಮತ್ತು ಪತ್ರವ್ಯವಹಾರಕ್ಕೆ ಅವಕಾಶ ಕಲ್ಪಿಸಲಾಗಿದೆಯೆಂದೂ ಪ್ರಕಟವಾಗಿದೆ.

★

ಪಾನನಿರೋಧ

ಹೈದರಾಬಾದು— ಆಂಧ್ರಪ್ರದೇಶದಲ್ಲಿ ಪಾನನಿರೋಧ ಜಾರಿಯಲ್ಲಿರಬೇಕೆಂದೂ, ಈ ಬಗ್ಗೆ ನಷ್ಟದ ಶೇಕಡ 50 ನ್ನು ಕೇಂದ್ರ ಕೊಡುವುದೆಂದೂ ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ಶಾಸನಸಭಾ ಕಾಂಗ್ರೆಸ್ ಪಕ್ಷದವರಿಗೆ ತಿಳಿಸಿದರು.

★

ಭಕ್ತ ತುಳಸೀದಾಸ್

(ಮುಂದುವರಿದುದು)

ತುಳಸೀದಾಸನು ಅವನಲ್ಲಿಗೆ ಓಡಿಹೋಗಿ, ಅವನ ಪವಿತ್ರ ಪಾದಗಳಿಗೆ ಬೀಳುವ ಯೋಚನೆ ಉಬ್ಬಿಸಿತು. ಭೂತದ ಮಾತಿನ ಸತ್ಯತೆ ಕಂಡುಕೊಂಡನು. ಭೂತದ ಮಾತು ಅವನ ಕಿವಿಯಲ್ಲಿ ಕೇಳಿಬರುತ್ತಿತ್ತು– ಬರುವದಕ್ಕೆ ಮಾಡಲು, ಹೋಗುವದಕ್ಕೆ ಕಡೆ ! ಆದ್ದರಿಂದ ಇನ್ನೊಂದು ದಿನ ಕಾದು, ಮಿಕ್ಕ ಭಾಗವನ್ನು ಪರೀಕಿಕ್ಷಿಸಲು ನಿರ್ಧರಿಸಿದನು.

ತಾನು ಮನೆಗೆ ವಾಪಸ್ಸು ಬಂದಾಗ ಇದೇ ಯೋಚನೆಯಲ್ಲಿ ಮಗ್ನನಾಗಿದ್ದ ತುಳಸೀದಾಸನು, ನಾಳೆಯ ವಿಷಯವನ್ನು ಯೋಚಿಸುತ್ತಾ, ಆಶೆ ಭೀತಿ ಸಮುದ್ರದಲ್ಲಿ ಸಿಕ್ಕಿ, ಅಶಾಂತಿಯಿಂದ ರಾತ್ರಿ ಕಳೆದನು. ಶ್ರೀ ರಾಮಚಂದ್ರನನ್ನು ಕಾಣುವ ನಿರೀಕ್ಷೆಯಿಂದ ಮಹದಾನಂದ ಒಂದು ಕಡೆ ಇದ್ದರೆ, ಪಶುಪಾಪಿಯಾದ ತಾನು ಹೇಗೆ ಭಗವಂತನ ಅನುಗ್ರಹ ಪಡೆಯಲು ಸಾಧ್ಯವೆಂಬ ನಿರಾಶೆ ಒಂದು ಕಡೆ, ತುಳಸೀದಾಸನನ್ನು ಆವರಿಸಿತ್ತು.

ಮಾರನೇ ದಿನ ಮಧ್ಯಾಹ್ನ ಕಥಾ ಪ್ರಾರಂಭನಾಗುವುದಕ್ಕೆ ಮುಂಚಿತವಾಗಿಯೇ ತುಳಸೀದಾಸನು ದಶಾಶ್ವಮೇಧಘಾಟಿಗೆ ಹೋದನು. ಆಗ ಇನ್ನೂ ಯಾರೂ ಬಂದಿರಲಿಲ್ಲ. ಸ್ವಲ್ಪ ಹೊತ್ತಾದನಂತರ ಕುಷ್ಟರೋಗಿಯು ಬಂದನು. ಅವನೇ ಮೊದಲು ಬಂದುಹೋದುದನ್ನು ತುಳಸೀದಾಸ್ ಗಮನಿಸಿದನು. ಆಗಿನಿಂದ ಕಥೆ ಎಂದಿಗೆ ಮುಗಿಯುವುದೋ, ತನಗೆ ಆ ಕುಷ್ಟರೋಗಿಯ ಕಾಲಿಗೆ ಬೀಳುವ ಅಮೂಲ್ಯ ಅವಕಾಶ ಎಂದಿಗೆ ದೊರೆಯುವದೋ ಎಂದು ತುಳಸೀದಾಸನು ಹಲುಬುತ್ತಿದ್ದನು.

ಘಾಟ್‌ನಲ್ಲಿ ಕಥಾಶ್ರವಣಕ್ಕೆ ಗುಂಪು ಹೆಚ್ಚಿತು, ಕಥೆ ಪ್ರಾರಂಭವಾಯಿತು. ತುಳಸೀದಾಸ್‌ಗೆ ಕಥೆ ಬಹಳ ದೀರ್ಘವಾಗಿ ಎಳೆಯುತ್ತಿರುವಂತೆ ಕಾಣಿಸಿತು. ಕಡೆಗೆ ಕಥೆ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೊರಟುಹೋದರು.

SHAKTI SUDHA

A Superb Tonic



ಗೋರಕ್ಷಣೆ ಮತ್ತು ಹಾಲಿನದಾ ಕಾರ್ಯಾಗಳು ಹೆಚ್ಚಿ ಬೆಳೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ದಿಗ್ವಿಜಯ 8 ನೇ ವಾರ

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹಪೇಸ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆಪೆರ— 21–6–68 ರಿಂದ

ಪವಿತ್ರ ಪಿಕ್ಚರ್ಸ್‌ರವರ

ಅನುಭವಳಿ [ತಮಿಳು]

ಪಾತ್ರ— ಜೈಶಂಕರ್, ಎಲ್. ವಿಜಯಲಕ್ಷ್ಮಿ, ನಾಗೇಶ್

Help The Gorakshana

ಗೋರಕ್ಷಣಾಕ್ಕೆ ಬೆಂಬಲ ನೀಡಿ

— ಗೋರಕ್ಷಣೆ ನ್ಯಾಯವಾದಿಕರ ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದರವಾಣಿದೆ ಕಳೆದುಂಬಹರು ಇವರ್ಲ್ಲಿ ಹಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಪಂಹಯಷ್ಮಂಗಾರ್, ಶಾಸ್ತ್ರಧರ್ಮ ಪ್ರಜಾಸಭಾ ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharn Nirata M S Krishna Rao (Proprietor) at the Satyavadi Press Chamarajapuram, Mysoe 4